ಹುಡುಗೀರಿಲ್ಲ ಅನ್ನೋದೇ ಸಮಾಧಾನ.

ನಮ್ಮ ಪ್ರತಿಭೆ ಜನರಲ್ಲಾಗಿ ನಮ್ಮ ಗುರುಗಳ ಎದುರು ಧಾರಾಳವಾಗಿ ಪ್ರದರ್ಶನಕ್ಕೆ ಭರಪೂರ ಅವಕಾಶಗಳಿರುತ್ತಿದ್ದವು. ಪುಸ್ತಕ ಹಿಡಿದು ಪೆನ್ನು ಬಳಸಿ ಕಲಿತದ್ದು ಕಡಿಮೆ ಆದರೂ ಗುರುಗಳ ಮಾತು, ಕ್ರಿಯೆ, ಮೌಖಿಕ ಸಂವಹನಗಳಷ್ಟೇ ನಮಗೆ ದಾರಿದೀಪವಾಗಿದ್ದವು. ಅವರು ಎಷ್ಟೇ ಹೊಡೀಲಿ ಬೈಯಲಿ, ನಮಗದು ಪ್ರಸಾದ. ನಮ್ಮ ಹೆಸರು ಹಿಡಿದು ಕೂಗಿದರಂತೂ ಸತ್ತುಹೋಗುವಷ್ಟು ಖುಷಿ!


ಕೆಂಡಯ್ಯ ಮೇಷ್ಟರ ಬಗ್ಗೆ ಹೇಳದಿದ್ದರೆ ಈ ಬರಹ ಪೂರ್ಣ ಆಗೋದೇ ಇಲ್ಲ. ಸಮಾಜ ಕಲಿಸುವ ಅವರು ನಮ್ಮೂರಿನ ಪಕ್ಕದ ಅಬ್ಬಿಗೆರೆಯವರು. ಬಿಳಿ ಅಂಗಿ, ಬಿಳಿ ಕಚ್ಚೆ ಪಂಚೆ ಅವರ ದಿರಿಸು. ಸ್ವಲ್ಪ ಮುಂಗೋಪಿ ಆದರೂ ಅಪಾರ ಜ್ಞಾನದ ಅವರ ಕಲಿಸುವಿಕೆ ಸರಾಗ. ನಮ್ಮ ಮೇಲೆ ಚಾಡಿ ಹೇಳಬೇಕೆಂದರೆ ಇವರಿಗೆ ಹೇಳಿದರಾಯಿತು; ಹೇಳಿದವನಿಗೂ ಆರೋಪಿಗೂ ಹುಣಸೆ ಜುಳಪಿಯ ಛಾಪು ಮೈಮೇಲೆ ಮೂಡುತ್ತಿದ್ದವು!

ಹಾಗೆ ಬಿಸಿ ಬಿಸಿ ಕಜ್ಜಾಯ ತಿಂದವ ಲಾಲ್ ಖಾನ್, ತಿನ್ನಿಸಿದವ ಕೊಬ್ರಿ ಪಟೇಲ. ಈಗಿನಂತೆ ಬಿಸಿಯೂಟ ಅಂದಿರಲಿಲ್ಲ. ಎಪ್ಪತ್ತರ ದಶಕದಲ್ಲಿ ನಮ್ಮ ನಮ್ಮ ಮನೆಗಳಲ್ಲಿ ಅನ್ನ ಕಾಣುತ್ತಿದ್ದುದೇ ಹಬ್ಬಗಳಲ್ಲಿ. ಮಧ್ಯಾಹ್ನ ಊಟಕ್ಕೆ ಬಿಟ್ರೆ ಮನೆಗೆ ಹೋಗ್ತಿರಲಿಲ್ಲ. ಹೋದರೂ ಬೆಳಗಿನ ಒಣ ರೊಟ್ಟಿ ಅಥವಾ ಹೆಲ್ಮೆಟ್ ಹಾಕಿಕೊಂಡ ಮುದ್ದೆ ಅಷ್ಟೆ! ಅದಕ್ಕೆ ಯಥಾರೀತಿಯ ಅತ್ತಿ ಹಣ್ಣು, ನೇರಳೆ ಹಣ್ಣು ತಿಂದು; ಕ್ಯಾಂಟೀನುಗಳಲ್ಲಿ ನಮಗಾಗಿ ಹೊರಗಡೆ ಒಂದು ಕಿಲಿಬು ಹಿಡಿದ ಹಿತ್ತಾಳೆ ಕೊಳಗದಲ್ಲಿ ನೀರಿಟ್ಟು ಸವೆದ ಸ್ಟೀಲ್ ಲೋಟ ಇಟ್ಟಿರೋರು! ಅದರಲ್ಲೇ ನೀರು ಕುಡಿದು ಕಾಲ ತಳ್ತಿದ್ವಿ!

ಅವತ್ತು ಹಂಗೇ... ಆಡುವಾಗ ಪಟೇಲನಿಗೆ ಲಾಲ್ ಖಾನ್ ಓಡಿಸಿಕೊಡು ಹೋಗ್ತಾ ಸೀದಾ ಇಬ್ರೂ ರೋಡಿಗೆ ಬಂದು ಬಿಟ್ರು. ಹಾಗೇ ಬರೋದಕ್ಕೂ ಆ ಕಡೆಯಿಂದ ಪೊಲೀಸ್ ಜೀಪ್ ಬರೋದಕ್ಕೂ ಸರಿಯಾಯಿತು. ಜೀಪೇನೋ ನಿಂತು ಮುಂದೆಹೋಯಿತು. ಅನಾಹುತ ಆಗಲಿಲ್ಲ. ಕಿಟಕಿಯಿಂದ ಕೆಂಡಯ್ಯ ಮೇಷ್ಟರು ನೋಡಿ ಕರೆದು ವಿಚಾರಿಸಿದಾಗ ಪಟೇಲ, ಲಾಲ್ ಖಾನ್ ಮೇಲೆ ಹೇಳಿದ.

ನಮ್ಮನ್ನೆಲ್ಲಾ ಹೊರ ಕಳಿಸಿ ಇಬ್ರಿಗೂ ಒಳ್ಳೆಯ ಪೂಜೆ ಆಯಿತು. ಲಾಲುಗೆ ಒಂದಿಷ್ಟು ಜಾಸ್ತಿನೇ ಆಯಿತು.

ಅದೇ ರಚ್ಚು ಇಟ್ಕೊಂಡ ಅವನು ಸೇಡಿಗೆ ಕಾಯ್ತಿದ್ದ. ಶಾಲೆ ಮಗ್ಗುಲಲ್ಲೇ ಪಿ.ಡಬ್ಲ್ಯೂ. ಡಿ ಆಫೀಸು, ದನದಾಸ್ಪತ್ರೆ ಪಕ್ಕವೇ ಡಾಂಬರ್, ಡ್ರಂಗಳಲ್ಲಿ ಸ್ಟಾಕಿರುತ್ತಿತ್ತು. ಬಿದಿರ ಹಸಿ ಕೋಲು ಕೆರೆ ಅಂಗಳದಿಂದ ತಂದು ಸವರಿ, ಬಗ್ಗಿಸಿ, ಸೆಳೆದುರೆ ಕಟ್ಟಿ ಬಿಲ್ಲು ಮಾಡ್ಕತಿದ್ವಿ. ಅದಕ್ಕೆ ಬಿಜಾಪುರದ ಜೋಳದ ಸಪ್ಪೆದಂಟಿನ ಕಡ್ಡಿಗಳನ್ನು ಸುಲಿದು ನೀಟಾಗಿ ಕತ್ತರಿಸಿಕೊಂಡು ಬಾಣ ಮಾಡಿಕೊಂಡು ಅದರ ತುದಿಗೆ ಅದೇ ಡ್ರಮ್ಮಿನಲ್ಲಿದ್ದ ಡಾಂಬರು ಉಗುಳು ಹಚ್ಚಿ ಕಿತ್ತು ಉಂಡೆ ಮಾಡಿ ಆ ಕಡ್ಡಿಗಳ ತುದಿಗಿಟ್ಟು, ಅದಕ್ಕೆ ಕರೇ ಜಾಲಿ ಮುಳ್ಳು ಮುರಿದು ಸಿಕ್ಕಿಸಿ ಆಡುತ್ತಿದ್ದೆವು. ಇದಕ್ಕೆಲ್ಲಾ ಡಾಕ್ಟರ್ ರಾಜ್‌ಕುಮಾರ್ ಅವರ 'ವೀರಕೇಸರಿ', 'ಮಯೂರ', 'ಬಭ್ರುವಾಹನ', 'ಹುಲಿಯ ಹಾಲಿನ ಮೇವು', 'ಕೃಷ್ಣದೇವರಾಯ' ಮುಂತಾದ ಸಿನಿಮಾಗಳೇ ಸ್ಫೂರ್ತಿ! ಇಂದಿನ ನಮ್ಮ ಮಕ್ಕಳು ಈ ಸಿನಿಮಾಗಳ ಹೆಸರೇ ಕೇಳಿಲ್ಲವೇನೋ! ಇನ್ನೂ ಈ ಬಿಲ್ಲು ಬಾಣದ ಸಡಗರ ಕಂಡಿರ್ತವಾ...?



ಅಂತಹ ಡಾಂಬರನ್ನು ಈ ಲಾಲ್ ಖಾನ್ ತಂದ ಮೇಷ್ಟ್ರುಗಳು ಕೂರೋ ಮರದ ಕುರ್ಚಿಗೆ ಹಾಕಿಬಿಟ್ಟ. ಅಬ್ಬಿಗೆರೆಯ ನಮ್ಮ ಕೆಂಡಯ್ಯ ಮೇಷ್ಟ್ರು ಮಧ್ಯಾಹ್ನದ ಶಾಲೆ, ಬಂದ್ರು, ಕೂತ್ರು. ಹಾಜರಿ ಹಾಕಿ ಎದ್ರೆ ಇಡೀ ಕುರ್ಚಿ ಜೊತೆಗೇ ಬರ್ತಿದೆ?

ನಾವೇ ಸಹಾಯ ಮಾಡಿ ಕಚ್ಚೆ ಮತ್ತು ಕುರ್ಚಿ ಹಿಡಿದು ನಿಧಾನವಾಗಿ ಬಿಡಿಸಿ ತೆಗೆದೆವು. ಅಲ್ಲಿಗೂ ಎರಡು ಮೂರು ಕಡೆ ಹರಿಯಿತು. ಈಗ ನಿಜಕ್ಕೂ ಕೆಂಡಯ್ಯ ಸರ್ ಕೆಂಡಾಮಂಡಲವಾಗಿ,

'ಯಾವ ಬೋಳಿ ಮಗನಲೆ ಡಾಂಬರು ಹಾಕಿದ್ದು?' ಎಂದು ಗುಡುಗಿದರು.

ಇಡೀ ಶಾಲೆ ಮೌನ.

ನಮಗಂತೂ ತೊಡೆ ನಡುಗುತ್ತಿದ್ದವು. ಒಮ್ಮೆ ಕದ್ದು ಪೊಲೀಸರ ಕೈಗೆ ಸಿಕ್ಕ ಕಳ್ಳ ಮುಂದೆ ಒಳ್ಳೆಯವನಾದರೂ ಎಲ್ಲೇ ಕಳ್ಳತನವಾಗಲಿ, ಈ ಹಳೆಯ ಕಳ್ಳನನ್ನು ಹಿಡಿದು ಒಯ್ಯುವಂತೆ ಶಾಲೆಗೆ ಚಕ್ಕರ್ ಹಾಕಿ ಪೋಲಿ ಅಲೆಯೋ ನಮ್ಮ ಮೇಲೇ ಕಣ್ಣು ಕೆಂಡಯ್ಯ ಸರ್‌ಗೆ!

ಯಾವ ದೇವರೂ ನಮ್ಮನ್ನು ಉಳಿಸಲಾರರು ಅಂತ ಸದಾ ಚಕ್ಕರ್ ಹೊಡಿಯೋ ನಮ್ಮ ಗುಂಪು ನೆನಪಿಗೆ ಬಾರದ ದೇವರನ್ನೆಲ್ಲಾ ನೆನಪು ಮಾಡಿಕೊಳ್ತಿರುವಾಗ, ಮುಳಗೋನಿಗೆ ಹುಲ್ಲುಕಡ್ಡಿಯೂ ಆಸರೆ ಅನ್ನಂಗೆ, ಕೊಬ್ರಿ ಪಟೇಲ ಎದ್ದ.

'ನೀನೇನೋ ಕೊಬ್ರಿ ಹಾಕಿದ್ದು' ಅಂದ್ರು ಸರು.

ಅವರಪ್ಪ ಕೊಬ್ರಿ ವ್ಯಾಪಾರಿ ಚನ್ನಬಸಪ್ಪ. ತಾಲೂಕಿಗೆ ಫೇಮಸ್ಸು. ಇವತ್ತು ಮಕ್ಕಳೆಲ್ಲಾ ಬೇರೆ ಬೇರೆ ಕಾಯಕ ಮಾಡ್ತಾ ಇದ್ರೂ ಕೊಬ್ರಿ ಅವರನ್ನು ಬಿಟ್ಟುಹೋಗಿಲ್ಲ!

'ಇಲ್ಲ ಸಾರ್, ನಾನಲ್ಲ. ಆದರೆ ಹಾಕಿದವನು ಯಾರಂತ ಗೊತ್ತು ' ಅಂದವನೇ ಲಾಲು ಕಡೆ ಬೆರಳು ಮಾಡಿದ.

ಇಡೀ ಕೋಣೆ ತುಂಬಾ ಓಡಾಡಿ ಲಾಲುನ ಬಡಿದರು ಕೆಂಡಯ್ಯನವರು. ಅದೇ ಕೊನೆ, ಲಾಲು ಗುಣವಂತನಾಗಿ ಬದಲಾಗಿ ಹೋದ. ಮುಂದೆ ಅದೇ ಗುರುಗಳ ಪರಮಾಪ್ತ ಶಿಷ್ಯನಾದ. ಓದಿ ಬರೆದು ಹೈಸ್ಕೂಲು ಇಂಗ್ಲೀಷ್ ಮೀಡಿಯಂಗೆ ಸಮೀಪದ ಕೆರೆಬಿಳಚಿ ಸೇರಿದ. ನಾವು ಕನ್ನಡ ಮಾಧ್ಯಮದಲ್ಲೇ ಸೈಕಲ್ ತುಳಿಯುತ್ತಾ ನಡೆದೆವು.

ಇಂದೇನಾದರೂ ಆಗಿದ್ದರೆ ಪೋಷಕರು ಪೊಲೀಸು, ಕಂಪ್ಲೇಂಟು, ಬೇರೆ ಶಾಲೆ, ಮೀಡಿಯಾ, ಸುದ್ದಿ ಅಂತ ರಂಪರಾಣ ಆಗಿ ಹೋಗೋದು!

ಕಲಿಸುವ ಕಾಯಕದಲ್ಲಿ ನಮ್ಮ ಅಂದಿನ ಗುರುಗಳು ಕಾಯಾ ವಾಚಾ ಮನಸಾ ಶ್ರಮಿಸುತ್ತಿದ್ದರು. ಈಗಲೂ ಅಪರೂಪಕ್ಕೆ ಕೆಲವರು ಸಿಗಬಹುದೇನೋ!?

ಸಣ್ಣ ಊರಾದ್ದರಿಂದ ನಮ್ಮ ನಮ್ಮ ಹೆತ್ತವರು ಮೇಷ್ಟ್ರ ಕೈಗೆ ಸುಲಭದಲ್ಲಿ ಸಿಗುತ್ತಿದ್ದರು. ನಮ್ಮ ದೂರು ಹೇಳಿ 'ಅಲ್ಲೇ ಶಾಲೇಲಿ ಕೈ ಕಾಲು ಕಟ್ಟಿ ಹಾಕಿ ನಾಕಕ್ಷರ ಕಲಿಸಿ ಸ್ವಾಮಿ' ಅಂತ ಕೈ ಮುಗಿಯೋರು.

ಇಂದು? ಪೇರೆಂಟ್ಸ್ ಮೀಟಿಂಗು ಅಂತ ಮಾಡಿದ್ರೆ ಕಾನ್ವೆಂಟುಗಳಲ್ಲಿ ಸರಾಗವಾಗಿ ಅಪ್ಪ ಅಥವಾ ಅಮ್ಮ ಬಂದುಬಿಡುತ್ತಾರೆ. ನಮ್ಮ ಮಗ ಓದಲಿ ಬಿಡಲಿ, ಹೊಡೆಯುವ ಸಾಹಸ ಮಾತ್ರ ಬೇಡ ಅಂತ ವಿನಂತಿ ಅಲ್ಲ, ಖಡಕ್ ವಾರ್ನಿಂಗೇ!

ಸರ್ಕಾರಿ ಶಾಲೆಗಳಲ್ಲಿ ಒಮ್ಮೆ ಅಡ್ಮಿಷನ್ ಮಾಡಿಸಿದರೆ ಆಯಿತು. ಅವನ ಶಿಕ್ಷಣ ಮುಗಿದ ನಂತರ ಬಂದ್ರು ಬಂದಂಗೆ ಇಲ್ಲ ಅಂದ್ರೆ ಅದೂ ಇಲ್ಲ. ಮನೆ ತುಂಬಾ ಮಕ್ಕಳ ಕಾಲ ಆಗ. ಈಗ? ಮನೆಗೆ, ಮನೆತನಕ್ಕೆ ಒಂದೊಂದೇ ಮಗು ಇಟ್ಕೊಂಡು ಸಕಲ ಸೌಭಾಗ್ಯ ಅದೊಂದಕ್ಕೆ ಸುರಿದು ಕಣ್ಣ ರೆಪ್ಪೆ ರೀತಿ ಮಕ್ಕಳನ್ನು ಕಾಯ್ದುಕೊಳ್ಳುವ ಪೋಷಕರಿಂದ ಶಿಕ್ಷಣ ಕ್ಷೇತ್ರದ ಸೈದ್ಧಾಂತಿಕ ಬದಲಾವಣೆ ಸಾಧ್ಯವಾದೀತಾ?

ಮೊನ್ನೆ ನಮ್ಮ ಅಂದಕಾಲತ್ತಿಲ್ ಗೆಳೆಯರು ಮೂರೂವರೆ ದಶಕದ ನಂತರ ಸೇರಿಕೊಂಡಿದ್ದೆವು. ನಮ್ಮ ನಮ್ಮ ಗುರುಗಳನ್ನು ನೆನೆದು ಎಷ್ಟು ಜನ ಇದ್ದಾರೆ ಯಾರು ಯಾರು ಅಗಲಿದ್ದಾರೆ ಅಂತ ಲೆಕ್ಕ ಹಾಕಿದರೆ... ಶಿಶುವಿಹಾರದಿಂದ (ಎಲ್.ಕೆ.ಜಿ.ಯ ಕೆ.ಜಿ ಅಂದು ಎಲ್ಲಿತ್ತು?) ಪ್ರಾಥಮಿಕದವರೆಗೆ ಕೇವಲ ನಾಲ್ಕೇ ನಾಲ್ಕು ಗುರುಗಳು ಬದುಕಿದ್ದಾರೆಂದು ತಿಳಿದು ಮನ ಮರುಗಿತು.

ಕನಿಷ್ಠ ಅಲ್ಲಲ್ಲಿ ಇರುವ ಈ ಗುರುಗಳಿಗೆ ಕಂಡು ಒಂದು ಶಾಲು, ಹಾರ ಹಾಕಿ ನಮಸ್ಕರಿಸಿ ಬರುವ ನಿರ್ಧಾರ ಮಾಡಿದ್ದೇವೆ. ಅದರ ಸಂಪೂರ್ಣ ಜವಾಬ್ದಾರಿ ಡಾಂಬರು ಲಾಲ್ ಖಾನ್ ತೆಗೆದುಕೊಂಡಿದ್ದಾನೆ.

ಸದ್ಯದಲ್ಲಿ ಗುರುದರ್ಶನಕ್ಕೆ ಹೊರಟಿದ್ದೇವೆ; ಗುರುವಿಲ್ಲದೇ ಗುರಿ ಎಲ್ಲಿದೆ ಅಂತ ನಮಗೆ ಈಗಲಾದರೂ ಗೊತ್ತಾಗಿದೆ. ನಮ್ಮ ಮಕ್ಕಳಿಗೆ ಯಾವಾಗ ತಿಳಿಯಬೇಕು?

ಕಾಲವೇ ಉತ್ತರಿಸಬೇಕು.

ಪ್ರತಿಕ್ರಿಯಿಸಿ: **feedback@sudha.co.in**